

ಎಡದಿಂದ ಬಲಕ್ಕೆ:

1. ಕೊನೆಯವರೆಗೂ ಅವನದೆಲ್ಲ ಬರೀ ಕನಸು (4)
3. ನಮ್ಮ ಭಾಷಾ ಹೆಸರನ್ನೇ ಹೋಲುವ 'ರಾಗ' (3)
4. ಮೂಢರ ಅಕಾರ್ಯಗಳಿಂದಾಗಿ ಕ್ಷಾಮದ ಜೊತೆಗಾರ (3)
6. ಸರಕು ಏನಿಲ್ಲ. ಅದು ಅಸುರ ವೈರಿಗಳದೇ ಪ್ರಪಂಚ (4)
7. ದೊಡ್ಡ ಕಪ್ಪಿನ ತುಂಬ ಸಿಹಿ ಪಾನೀಯ (3)
9. ಮೂರೆಣಿಸುವಷ್ಟರಲ್ಲಿ ಸೋಲಿಸು (3)
11. ವೈಣಿಕರಾರೋ ಕರೆದಂಥ ಕೂಗು (3)
13. ನಾನಾ ವಿಧಾನಗಳಲ್ಲೂ ಇದೇ ಹೊಸದು (3)
15. ವಸಂತೋತ್ಸವ ಆಚರಣೆಗೊಂಡ ವರ್ಷ (4)
17. ನಶ್ವರ ಮನುಷ್ಯರ ಒಡೆಯ–ದೇವ (3)
18. ಖಜಾನೆಯ ಪಾಲಕನೇ ಅವನ ತಂದೆ (3)
19. ಮೇಜವಾನಿ ಏರ್ಪಡಿಸಿದಾಕೆಯೇ ಅವರ ಮುಖ್ಯಸ್ಥೆ (4)

ಮೇಲಿಂದ ಕೆಳಕ್ಕೆ:

1. ಕೇಡೆಣಿಸುವುದೇಕೆ? ಅದಿನ್ನೂ ಎಳೇ ಹಸು (3)
2. ಕೊರಡು ತುಂಬಿದ್ದ ಭಾರೀ ಹಂಡೆ ಬುಡ ಮೇಲು (3)
3. ಕೊನೆಯನ್ನೇ ಕಾಣಲಾಗದಂಥ ನಿಬಿಡ ಅರಣ್ಯ (3)
5. ರಾವಣನ ಸತಿಯಾದರೂ ಸುಂದರಿ (3)
7. ಪೇರಲದ ವ್ಯಾಪಾರದಲ್ಲಿ ಭಾಗಸ್ಥ ಈತ (4)
8. ಕವಡೆ ಹಾಕಿ ಹಣ ಕೀಳುವ ದಂಧೆಗೆ ನಿಯಂತ್ರಣ (4)
9. ಮಹತ್ವವನ್ನೇ ತಿಳಿದಿಲ್ಲ–ಬುದ್ಧಿ ಇಲ್ಲದವ (4)
10. ಒಳ್ಳೆಯ ಯೋಧ ಹೌದು–ಹಿರಿಯ ಕೌರವ (4)
12. ಅರ್ಥವನ್ನೇ ಬಳಸಿದ್ದರೂ ತುಂಬ ಅಭಿವೃದ್ಧಿ (3)
14. ಕ್ಷಣ ಕ್ಷಣದ ವಿಚಾರವನ್ನೂ ನೇರ ನೋಡಿದಾತ (3)
15. ಆಶಯ ಕೈಗೂಡುವ ಬಗೆಗೆ ಭಾರೀ ಸಂದೇಹ ಇದೆ (3)
16. ನೀರಜ ಅರಳುವ ವೇಳೆ ರಾತ್ರಿ ಹೌದೇ?

### ಪದಬಂಧ 22–08–2013 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಸ್ಥಿರತೆ; 3. ಅಧೀನ; 4. 'ಪ್ಪಡ್ಡದೊ' (ದೊಡ್ಡಪ್ಪ ಹಿಂದು ಮುಂದು); 6. ವಕ್ರದನಿ; 7. ಅತ್ಯವಶ್ಯ; 9. 'ರುಕದುಮು'; 12. ಕರಭಯ; 15. ಆಮೆವೇಗ; 17. ಮನೆಮಂದಿ; 18. 'ಕವುಭಾ'; 19. ಕಾಮನೆ; 20. ರಸಾತಲ.

ಮೇಲಿಂದ ಕೆಳಕ್ಕೆ:

1. ಅನವಶ್ಯ; 2. ತೆಪ್ಪನಿರು; 3. ಅನಿತ್ಯ; 5. ದೊಡ್ಡದು; 7. ಅನೇಕ; 8. ವಲ್ಲಭ; 10. ಕಡಿಮೆ; 11. ಮುರುಗ; 13. ರಜಕ; 14. ಯಮಭಾರ; 15. ಆದಿಕಾಲ; 16. ವೇದನೆ.

# ಪ್ರಶ್ನಾಂಕಣ

## ಮರುಭೂಮಿ ಮರಿ ಮೀನು– ಅದೇನು?

ಅದು ಜೀವಜಗದ, ಪ್ರಾಣಿಲೋಕದ ಒಂದು ಪರಮ ವಿಸ್ಮಯ. ಅತ್ಯುಗ್ರ ಬಿಸಿಲಿಗೂ, ತೀವ್ರ ಜಲಾಭಾವಕ್ಕೂ ವಿಶ್ವ ಪ್ರಸಿದ್ಧವಾಗಿರುವ 'ಮೃತ್ಯು ಕಣಿವೆ' (ಡೆತ್ ವ್ಯಾಲೀ)ಯಲ್ಲಿ ಒಂದೇ ಒಂದು ಮತ್ಸ್ಯ ಜಾತಿಯ ನಾಲ್ಕು ಪ್ರಭೇದಗಳು ಹತ್ತು ಸಾವಿರ ವರ್ಷಗಳಿಂದ ನೆಲೆಗೊಂಡಿವೆ. ಹೆಸರಿನಲ್ಲೇ ಭಯಂಕರ ಸ್ವರೂಪವನ್ನು ಬಿಂಬಿಸುವ ನರಕ ಸದೃಶ ಮರಳುಗಾಡಿನಲ್ಲಿ ಮನೆ ಮಾಡಿರುವ ಪುಟ್ಟ ಗಾತ್ರದ ಮತ್ಸ್ಯಗಳು 'ಮರುಭೂಮಿ ಮರಿಮೀನು' (ದಿ ಡೆಸರ್ಟ್ ಪಪ್ ಫಿಶ್) ಎಂಬ ಅಚ್ಚರಿಯ ಅಭಿಧಾನವನ್ನೂ ಪಡೆದು ಮತ್ಸ್ಯಲೋಕದಲ್ಲಿ ಅನನ್ಯ, ಅನೂಹ್ಯ ದಾಖಲೆ ನಿರ್ಮಿಸಿವೆ.

ಹಾಗೆಂದು ಈ ನಾಲ್ಕೂ ಮತ್ಸ್ಯಪ್ರಭೇದಗಳು ಮೂಲತಃ ಮೃತ್ಯು ಕಣಿವೆಯಲ್ಲೇ ಉದ್ಭವಿಸಿದ್ದೇನಲ್ಲ. ವಾಸ್ತವ ಏನೆಂದರೆ ಈಗ ಮೃತ್ಯು ಕಣಿವೆ ಇರುವ ಪ್ರದೇಶ ಕಳೆದ 'ಹಿಮಯುಗ'ದಲ್ಲಿ – ಎಂದರೆ ಈಗ್ಗೆ ಹತ್ತು ಸಾವಿರದಿಂದ ಮುವ್ವತ್ತು ಸಾವಿರ ವರ್ಷ ಹಿಂದಿನ ಅವಧಿಯಲ್ಲಿ– ಮಹಾ ವಿಸ್ತಾರದ 'ಮಾನ್ಲಿ ಸರೋವರ' ಆಗಿತ್ತು. ಶುದ್ಧ ಸಿಹಿನೀರಿನ ಆ ಬೃಹತ್ ಜಲಾವಾರದಲ್ಲಿ ಈ ಮೀನುಗಳ ಮೂಲ ಜಾತಿ 'ಸೈಪ್ರಿನೋಡಾನ್'ನ ಅಸಂಖ್ಯ ಮತ್ಸ್ಯಗಳು ನೆಮ್ಮದಿಯ ಬಾಳುವೆ ನಡೆಸಿದ್ದುವು. ಈಗ್ಗೆ ಹತ್ತುಸಾವಿರ ವರ್ಷಗಳ ಹಿಂದೆ ಹಿಮಯುಗ ಅಂತ್ಯಗೊಂಡ ನಂತರ ವಾಯುಗುಣ ಬದಲಾಗಿ ಮಾನ್ಲಿ




ಸರೋವರ ಬತ್ತಿಹೋಯಿತು; ಅಲ್ಲಲ್ಲಿ ಅಂತರ್ಜಲ ಚಿಲುಮೆಗಳಿದ್ದ ಕಡೆಗಳಲ್ಲಿ 'ಅಂಗೈ ಅಗಲದ', ಅಲ್ಪ ಜಲ ಸಂಗ್ರಹದ ಹೊಂಡಗಳಷ್ಟೇ ಉಳಿದುವು. ಕೆಲವು ಹೊಂಡಗಳಲ್ಲಿ ಸಿಹಿನೀರು, ಇನ್ನು ಕೆಲ ಹೊಂಡಗಳಲ್ಲಿ ಕ್ಷಾರನೀರು, ಉಳಿದವುಗಳಲ್ಲಿ ಕುದಿ ನೀರು ಈಗಲೂ ಉಕ್ಕುತ್ತಿದೆ.

ಹೀಗೆ ಸಂಪೂರ್ಣ ಬದಲಾದ ಪರಿಸ್ಥಿತಿಯಲ್ಲಿ ಸಾರಾಸಗಟು ಅಳಿದು ಹೋಗದೆ, ಹಟ ತೊಟ್ಟಂತೆ ಅಲ್ಪ ಸಂಖ್ಯೆಯಲ್ಲಿ ಉಳಿದ ಸೈಪ್ರಿನೋಡಾನ್ ಮೀನುಗಳು ಈ ತ್ರಿವಿಧ ಅಲ್ಪಜಲದ ಆಸರೆಯಲ್ಲೇ ನೆಲಸಿ ತಮ್ಮ ಪ್ರತ್ಯೇಕ ವಿಭಿನ್ನ ನೆಲೆಗಳಿಗೆ ತಕ್ಕಂತೆ ಮಾರ್ಪಾಡುಗಳಿಸಿ ನಾಲ್ಕು ವಿವಿಧ ಪ್ರಭೇದಗಳಾದುವು: 'ತಣ್ಣನೆಯ ಹೊಂಡಗಳ 'ಸೈಪ್ರಿನೋಡಾನ್ ಸಾಲಿನಸ್', ಲವಣ ಜಲದ ಹೊಂಡಗಳ 'ಸೈಪ್ರಿನೋಡಾನ್ ನಿವ್ಯಾಡೆನ್ಸಿಸ್' ಮತ್ತು ಬಿಸಿನೀರಿನ ಹೊಂಡಗಳ 'ಸೈಪ್ರಿನೋಡಾನ್ ಡಯಾಬೋಲಿಸ್' (ಚಿತ್ರ–1) ಹಾಗೂ 'ಸೈಪ್ರಿನೋಡಾನ್ ರೇಡಿಯೋಸಸ್' (ಚಿತ್ರ–2).' ಈ ಎಲ್ಲ ಮತ್ಸ್ಯಗಳದೂ ಎರಡು–ಮೂರು ಇಂಚು ಮೀರದ ಉದ್ದ. ಅವಿರುವ ನೀರಲ್ಲಿ ಬೆಳೆವ ಪಾಚಿ ಸಸ್ಯಗಳನ್ನೇ ಸೇವಿಸುತ್ತ, ಒಂದಕ್ಕೊಂದು ಸಂಪರ್ಕವೇ ಇಲ್ಲದ ಇಪ್ಪತ್ತು ತಂಡಗಳಾಗಿ ಉಳಿದಿವೆ. ನೀರಿನ ಚಿಕ್ಕ ತೊಟ್ಟಿಗಳಂತಹ ಪ್ರತಿ ಹೊಂಡದಲ್ಲೂ ಅಲ್ಲಿಗೆ ತಕ್ಕಷ್ಟೇ ಅತ್ಯಲ್ಪ 'ಜನಸಂಖ್ಯೆ'ಗಳಲ್ಲಿ ಬಾಳುತ್ತಿವೆ. 'ಮೃತ್ಯುಕಣಿವೆ'ಯಲ್ಲೇ ಇದ್ದೂ ಮೃತ್ಯುವನ್ನೇ ಧಿಕ್ಕರಿಸುತ್ತ ಬದುಕಿವೆ.

■ ಎನ್. ವಾಸುದೇವ್